ಪಡಿತರ ಪದಾರ್ಥಗಳ ಬೆಲೆ ಏರಿಕೆ ಕುರಿತು.

2267(2904)

ಶ್ರೀ ರಾಜುಗೌಡ ಜಿ.(ಹನ್ನೂರು):ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಕೇಂದ್ರ ಸರ್ಕಾರವು ಇತ್ತೀಚಿನ ಪಡಿತರ ಪದಾರ್ಥಗಳ ಬೆಲೆ ಏರಿಕೆಯಿಂದ ರಾಜ್ಯ ಸರ್ಕಾರದ ಮೇಲೆ ಆರ್ಥಿಕ ಹೊರೆ ಎಷ್ಟಾಗುತ್ತದೆ;

ಆ) ಇದನ್ನು ಸರಿದೂಗಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರ ದಿನಾಂಕ 1.3.2000 ದಿಂದ ಸಕ್ಕರೆ ಅಂತಿಮ ಮಾರಾಟ ಬೆಲೆಯನ್ನು ಪ್ರತಿ ಕೆ.ಜಿ.ಗೆ ರೂ. 12-00 ರಿಂದ ರೂ. 13-00ಕ್ಕೆ ಹೆಚ್ಚಿಸಿದೆ.

ದಿನಾಂಕ 23.3.2000ದಿಂದ ಜಾರಿಗೆ ಬರುವಂತೆ ಸೀಮೆಎಣ್ಣೆ ಮೂಲ ಬೆಲೆಯನ್ನು ಪ್ರತಿ ಕಿಲೋ ಲೀಟರಿಗೆ ರೂ.2331.37ರಿಂದ ರೂ.5215.90ಕ್ಕೆ ಹೆಚ್ಚಿಸಿದ ಹಿನ್ನೆಲೆಯಲ್ಲಿ ಸೀಮೆಎಣ್ಣೆ ವಿತರಣಾ ಬೆಲೆಯನ್ನು ಪ್ರತಿ ಲೀಟರಿಗೆ ರೂ. 3-00 ರಿಂದ ರೂ.6-00ಕ್ಕೆ ಹೆಚ್ಚಿಸಿ ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಕ್ಕೆ ನಿಗದಿಪಡಿಸಿದೆ. ಹಾಗೂ ವಿವಿಧ ಜಿಲ್ಲೆಗಳ ಸೀಮೆಎಣ್ಣೆ ಬೆಲೆಯು ರೂ. 5-80 ರಿಂದ ರೂ.6-60 ಆಗಿರುತ್ತದೆ.

ಸಕ್ಕರೆ ಸೀಮೆಎಣ್ಣೆ ಬೆಲೆ ಏರಿಕೆಯ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಿರುವುದರಿಂದ ಸರ್ಕಾರಕ್ಕೆ ಹೊರೆ ಇರುವುದಿಲ್ಲ. ಆದರೆ ದಿನಾಂಕ 1-4-2000ದಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ಅಕ್ಕಿ ಮತ್ತು ಗೋಧಿಯ ಕೇಂದ್ರ ವಿತರಣಾ ಬೆಲೆಯನ್ನು ಈ ಕೆಳಗಿನಂತೆ ಪರಿಷ್ಕರಿಸಿ ಆದೇಶ ಹೊರಡಿಸಿದೆ.

	ಹಿಂದಿನ ಬಿಪಿಎಲ್	ಪರಿಷ್ಕೃತ ಬಿಪಿಎಲ್	ಎಪಿಎಲ್
	ರೂ.	ರೂ.	ರೂ.
ಅಕ್ಕಿ	3-50	5-90	11-80
ಗೋಧಿ	2-50	4-50	9-75

ಇದರಿಂದ ರಾಜ್ಯ ಸರ್ಕಾರ ನೀಡಿರುವ 64.67 ಲಕ್ಷ ಹಸಿರು ಪಡಿತರ ಚೀಟಿದಾರರಿಗೆ

ಕೇಂದ್ರ ಸರ್ಕಾರದ ಹೊಸ ನೀತಿಯಿಂದ ಪ್ರತಿ ಹಸಿರು ಕಾರ್ಡಿಗೆ ಮಾಹೆಯಾನ 16 ಕೆ.ಜಿ. ಅಕ್ಕಿ 4 ಕೆ.ಜಿ. ಗೋಧಿ ಒದಗಿಸಲು ಪ್ರತಿ ಕ್ವಿಂಟಾಲ್ ಅಕ್ಕಿ-ಗೋಧಿಗೆ ಒದಗಿಸಬೇಕಾದ ಸಹಾಯಧನ-

	ಬಿಪಿಎಲ್	ಇಬಿಪಿಎಲ್
	ರೂ.	ರೂ.
ಅಕ್ಕಿ	1-00	595-00
ಗೋಧಿ	-	443-00

ಈ ಪ್ರಮಾಣದಲ್ಲಿ ಸಹಾಯಧನ ಒದಗಿಸಲು ಹಾಗೂ ಸಾಗಾಣಿಕೆ ವೆಚ್ಚವನ್ನು ಭರಿಸಲು ರಾಜ್ಯ ಸರ್ಕಾರ ವಾರ್ಷಿಕವಾಗಿ ರೂ. 550-00 ಕೋಟಿ ಒದಗಿಸಬೇಕಿದ್ದು, ಈ ಮೊತ್ತ ಕಳೆದ ವರ್ಷದ ರೂ. 305 ಕ್ಕಿಂತ 245 ಕೋಟಿಯಷ್ಟು ಹೆಚ್ಚಾಗಿರುತ್ತದೆ.

ಆ) ರಾಜ್ಯ ಸರ್ಕಾರ ಹೆಚ್ಚಿನ ಬೆಲೆಯನ್ನು ತನ್ನ ಆರ್ಥಿಕ ಮೂಲಗಳಿಂದ ಭರಿಸಲು ನಿರ್ಧರಿಸಿದೆ.

ಲೋಕಾಯುಕ್ತ ದಾಳಿಯಿಂದ ಗಳಿಸಿದ ಆಸ್ತಿಯ ಮೌಲ್ಯ.

2268(2905)

ಶ್ರೀ ರಾಜುಗೌಡ .ಜಿ(ಹನೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ಲೋಕಾಯುಕ್ತ ದಾಳಿ ನಡೆಯಿಸಿರುವ ಪ್ರತಿ ಪ್ರಕರಣಗಳಲ್ಲೂ ಗಳಿಸಿರುವ ಆದಾಯ ಮೌಲ್ಯ ಎಷ್ಟು?

ಆ) ಅವರು ಗಳಿಸಿರುವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಅವರ ವಿರುದ್ಧ ಕೈಗೊಂಡಿರುವ ಪ್ರಕರಣಗಳೆಷ್ಟು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿ):

ಅ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಎಲ್ಲಾ ಪ್ರಕರಣಗಳಲ್ಲಿ ಲೋಕಾಯುಕ್ತ ಪೋಲೀಸರಿಂದ ತನಿಖೆ